**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**

**ತರೀಕೆರೆ.**

**ಸಿ.ಸಿ.ನಂ: 884/2014**

**ಸಾಕ್ಷಿಯ ಹೆಸರು** : ಡಾಃ ಕುಮುದ ರಾಣಿ **ಪಿಡಬ್ಲ್ಯೂ : 28**

ತಂದೆ **ಹೆಸರು** : ಮುಕುಂದಪ್ಪ **ಸಿಡಬ್ಲ್ಯೂ : 29**

**ವಯಸ್ಸು** : 46 **ವರ್ಷ**

**ಉದ್ಯೋಗ** : ಉಪ ನಿರ್ದೇಶಕರು,

**ವಾಸ ಸ್ಥಳ** : ನ್ಯಾಯಾ ವಿಜ್ಞಾನ ಪ್ರಯೋಗಲಾಯ

ಮಡಿವಾಳ ಬೆಂಗಳೂರು

ಸಾಕ್ಷಿದಾರರು ವೀಡಿಯೋ ಕಾನ್ಪರೆನ್ಸ ಮೂಲಕ ನ್ಯಾಯಾಲಯದ ಎದುರು ಹಾಜರಾಗಿರುತ್ತಾರೆ.

**ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 29-12-2021**

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ**

ದಿ *21-01-2014* ರಂದು ಕ್ರೈಂ *67/2013* ರಲ್ಲಿ ದಾಖಲೆಗಳನ್ನು ಚಾಸಾ-*32* ರವರು ನಮ್ಮ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಅದರಲ್ಲಿ *7* ಸೀಲಾದ ಪಾಕೇಟ್ ಕವರ್ ಗಳು ಇದ್ದವು. ಅವುಗಳು ಸುಸ್ತಿತಿಯಲ್ಲಿದ್ದು, ಮಾದರಿ ಸೀಲಿನೊಂದಿಗೆ ಹೋಲಿಕೆ ಆಗುತ್ತಿದ್ದವು. ಅದರಲ್ಲಿ

*1.* ಮೊದಲನೇ ಕವರುನ್ನು ಓಪನ್ ಮಾಡಿ ನೋಡಲಾಗಿ ಅದರಲ್ಲಿ *9* ಜ್ಯುವೆಲ್ ಲೋನ್ ಅಪ್ಲಿಕೇಷನ್ ಗಳು ಇದ್ದವು. ಅವುಗಳಲ್ಲಿನ ಪ್ರಶ್ನಿತ ಸಹಿಗಳಿಗೆ ಕ್ಯೂ *1* ರಿಂದ ಕ್ಯೂ *39* ಎಂದು ಗುರುತು ಮಾಡಲಾಯಿತು.

*2. 2*ನೇ ಕವರ್ ನ್ನು ಓಪನ್ ಮಾಡಿ ನೋಡಲಾಗಿ ಅದರಲ್ಲಿ ಜಿ ಉಮೇಶ್ ಎನ್ನುವವರ ಒಪ್ಪಿತ ಸಹಿವುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ ಒಪ್ಪಿತ ಸಹಿಗಳಿಗೆ ಇ *1* ರಿಂದ ಇ *-3* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಜಿ ಉಮೇಶ್ ಎನ್ನುವವರ ಮಾದರಿ ಸಹಿಗಳುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *1* ರಿಂದ ಆರ್ *6* ಎಂದು ಗುರುತು ಮಾಡಲಾಯಿತು.

*3.* *3*ನೇ ಕವರನ್ನು ಓಪನ್ ಮಾಡಿ ನೋಡಲಾಗಿ ಅದರಲ್ಲಿ ಮಾಲತಿ ಇ ಎನ್ನುವವರ ಒಪ್ಪಿತ ಸಹಿಗಳುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ ಒಪ್ಪಿತ ಸಹಿಗಳಿಗೆ ಇ *4* ರಿಂದ ಇ *-6* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಮಾಲತಿ ಇ ಎನ್ನುವವರ ಮಾದರಿ ಸಹಿಗಳುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *7* ರಿಂದ ಆರ್ *12* ಎಂದು ಗುರುತು ಮಾಡಲಾಯಿತು.

*4.* *4*ನೇ ಕವರನ್ನು ಓಪನ್ ಮಾಡಿ ನೋಡಲಾಗಿ ಅದರಲ್ಲಿ ವಿನೋದಮ್ಮ ಎನ್ನುವವರ ಒಪ್ಪಿತ ಸಹಿಗಳುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ ಒಪ್ಪಿತ ಸಹಿಗಳಿಗೆ ಇ *7* ರಿಂದ ಇ *-9* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ವಿನೋದಮ್ಮ ಎನ್ನುವವರ ಮಾದರಿ ಸಹಿಗಳುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *13* ರಿಂದ ಆರ್ *18* ಎಂದು ಗುರುತು ಮಾಡಲಾಯಿತು.

*5.* *5*ನೇ ಕವರನ್ನು ಓಪನ್ ಮಾಡಿ ನೋಡಲಾಗಿ ಅದರಲ್ಲಿ ಎಂ ಪುಟ್ಟಸ್ವಾಮಿ ಎನ್ನುವವರ ಒಪ್ಪಿತ ಸಹಿಗಳುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ ಒಪ್ಪಿತ ಸಹಿಗಳಿಗೆ ಇ *10* ರಿಂದ ಇ *-12* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಎಂ ಪುಟ್ಟಸ್ವಾಮಿ ಎನ್ನುವವರ ಮಾದರಿ ಸಹಿಗಳುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *19* ರಿಂದ ಆರ್ *24* ಎಂದು ಗುರುತು ಮಾಡಲಾಯಿತು.

*6.* *6*ನೇ ಕವರನ್ನು ಓಪನ್ ಮಾಡಿ ನೋಡಲಾಗಿ ಅದರಲ್ಲಿ ಎಸ್ ಬಿ ನಿಂಗಪ್ಪ ಎನ್ನುವವರ ಒಪ್ಪಿತ ಸಹಿಗಳುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ ಒಪ್ಪಿತ ಸಹಿಗಳಿಗೆ ಇ- *13* ರಿಂದ ಇ *-15* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಎಸ್ ಬಿ ನಿಂಗಪ್ಪ ಎನ್ನುವವರ ಮಾದರಿ ಸಹಿಗಳುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *25* ರಿಂದ ಆರ್ *30* ಎಂದು ಗುರುತು ಮಾಡಲಾಯಿತು.

*7.* *7*ನೇ ಕವರನ್ನು ಓಪನ್ ಮಾಡಿ ನೋಡಲಾಗಿ ಅದರಲ್ಲಿ ಬಿ ಎಸ್ ಸುರೇಶ್ ಎನ್ನುವವರ ಒಪ್ಪಿತ ಸಹಿಗಳುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ

ಒಪ್ಪಿತ ಸಹಿಗಳಿಗೆ ಇ- *16* ರಿಂದ ಇ *-18* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಬಿ.ಎಸ್ ಸುರೇಶ್ ಎನ್ನುವವರ ಮಾದರಿ ಸಹಿಗಳವುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *31* ರಿಂದ ಆರ್ *36* ಎಂದು ಗುರುತು ಮಾಡಲಾಯಿತು.

ಅದೇ ಕವರಿನಲ್ಲಿ ಎ ಕುಮಾರ್ ಎನ್ನುವವರ ಒಪ್ಪಿತ ಸಹಿಗಳುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ ಒಪ್ಪಿತ ಸಹಿಗಳಿಗೆ ಇ- *19* ರಿಂದ ಇ *-21* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಎ ಕುಮಾರ್ ಎನ್ನುವವರ ಮಾದರಿ ಸಹಿಗಳವುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *37* ರಿಂದ ಆರ್ *42* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಕೇಶವಮೂರ್ತಿ ಎನ್ನುವವರ ಒಪ್ಪಿತ ಸಹಿಗಳುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ ಒಪ್ಪಿತ ಸಹಿಗಳಿಗೆ ಇ- *22* ರಿಂದ ಇ *-24* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಕೇಶವಮೂರ್ತಿ ಎನ್ನುವವರ ಮಾದರಿ ಸಹಿಗಳವುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *43* ರಿಂದ ಆರ್ *48* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಆರ್ ರಾಘವೇಂದ್ರ ಎನ್ನುವವರ ಒಪ್ಪಿತ ಸಹಿಗಳುಳ್ಳ ಒಂದು ಅಕೌಂಟ್ ಒಪನಿಂಗ್ ಫಾರಂ ಇದ್ದು, ಅದರಲ್ಲಿರುವ ಒಪ್ಪಿತ ಸಹಿಗಳಿಗೆ ಇ- *25* ರಿಂದ ಇ *-27* ಎಂದು ಗುರುತು ಮಾಡಲಾಯಿತು. ಅದೇ ಕವರಿನಲ್ಲಿ ಆರ್.ರಾಘವೇಂದ್ರ ಎನ್ನುವವರ ಮಾದರಿ ಸಹಿಗಳವುಳ್ಳ *6* ಹಾಳೆಗಳು ಇದ್ದು, ಸದರಿ ಸಹಿಗಳನ್ನು ಆರ್ *60* ರಿಂದ ಆರ್ *66* ಎಂದು ಗುರುತು ಮಾಡಲಾಯಿತು.

ಅದೇ ಕವರಿನಲ್ಲಿ ರವಿನಾರಾಯಣ್ ಎನ್ನುವವರ ಮಾದರಿ ಸಹಿಗಳವುಳ್ಳ *11* ಹಾಳೆಗಳು ಇದ್ದು, ಸದರಿ ಹಾಳೆಗಳಲ್ಲಿನ ಸಹಿಗಳನ್ನು ಆರ್ *49* ರಿಂದ ಆರ್ *59* ಎಂದು ಗುರುತು ಮಾಡಲಾಯಿತು.

ಈ ಮೇಲಿನ ಎಲ್ಲಾ ಪ್ರಶ್ನಿತ ಸಹಿಗಳು ಹಾಗೂ ಮಾದರಿ ಸಹಿಗಳು ನಮ್ಮ ಕಛೇರಿಯಲ್ಲಿರುವ ವೈಜ್ಞಾನಿಕ ಉಪಕರಣಗಳಿಗೆ ಅಳವಡಿಸಿ ಅವುಗಳ ವೈಜ್ಞಾನಿಕ ವಿಶ್ಲೇಷಣೆ ನಡೆಸಿರುತ್ತೇನೆ ಹಾಗೂ ಅವುಗಳ ವಿಶ್ರುತ ಪ್ರತಿಗಳನ್ನು ಸಹ ಪಡೆದಿರುತ್ತೇನೆ. ನಂತರ ನನ್ನ ಅಭಿಪ್ರಾಯವನ್ನು ಈ ಕೆಳಗಿನಂತೆ ವ್ಯಕ್ತಪಡಿಸಿರುತ್ತೇನೆ.

*1.* ಇ*-1* ರಿಂದ ಇ*-3* ಹಾಗೂ ಆರ್*-1* ರಿಂದ ಆರ್*-6* ಸಹಿಗಳನ್ನು ಬರೆದಿರುವ ವ್ಯಕ್ತಿಯೇ ಪ್ರಶ್ನಿತ ಸಹಿಗಳಾದ ಕ್ಯೂ*-10* ರಿಂದ ಕ್ಯೂ*-14,* ಕ್ಯೂ*-21* ಮತ್ತು ಕ್ಯೂ*-22* ನ್ನು ಬರೆದಿರುತ್ತಾರೆ.

*2.* ಇ*-4* ರಿಂದ ಇ*-6,* ಆರ್*-7* ರಿಂದ ಆರ್*-12* ಸಹಿಗಳನ್ನು ಬರೆದಿರುವ ವ್ಯಕ್ತಿಯು ಪ್ರಶ್ನಿತ ಸಹಿಗಳಾದ ಕ್ಯೂ*-15* ಮತ್ತು ಕ್ಯೂ*16* ನ್ನು ಬರೆದಿರುವುದಿಲ್ಲ. ಪ್ರಶ್ನಿತ ಸಹಿಗಳಾದ ಕ್ಯೂ*-15* ಮತ್ತು ಕ್ಯೂ*16* ಇಮಿಟೆಷನ್ ಫೋರ್ಜರಿ ಆಗಿರುತ್ತವೆ.

*3.* ಇ*-7* ರಿಂದ ಇ*-9* ಹಾಗೂ ಆರ್*-13* ರಿಂದ ಆರ್*-18* ಸಹಿಗಳನ್ನು ಬರೆದಿರುವ ವ್ಯಕ್ತಿಯೇ ಪ್ರಶ್ನಿತ ಸಹಿಗಳಾದ ಕ್ಯೂ*-17* ಮತ್ತು ಕ್ಯೂ*-18* ನ್ನು ಬರೆದಿರುವುದಿಲ್ಲ. ಪ್ರಶ್ನಿತ ಸಹಿಗಳಾದ ಕ್ಯೂ*-17* ಮತ್ತು ಕ್ಯೂ *18* ಇಮಿಟೆಷನ್ ಫೋರ್ಜರಿ ಆಗಿರುತ್ತವೆ.

*4.* ಇ*-10* ರಿಂದ ಇ*-12* ಹಾಗೂ ಆರ್*-19* ರಿಂದ ಆರ್*-24* ಸಹಿಗಳನ್ನು ಬರೆದಿರುವ ವ್ಯಕ್ತಿಯೇ ಪ್ರಶ್ನಿತ ಸಹಿಗಳಾದ ಕ್ಯೂ*-19* ಮತ್ತು ಕ್ಯೂ*-20* ನ್ನು ಬರೆದಿರುತ್ತಾರೆ.

*5.* ಇ*-13* ರಿಂದ ಇ*-15* ಹಾಗೂ ಆರ್*-25* ರಿಂದ ಆರ್*-30* ಸಹಿಗಳನ್ನು ಬರೆದಿರುವ ವ್ಯಕ್ತಿಯೇ ಪ್ರಶ್ನಿತ ಸಹಿಗಳಾದ ಕ್ಯೂ*-23* ಮತ್ತು ಕ್ಯೂ*-24* ನ್ನು ಬರೆದಿರುತ್ತಾರೆ.

*6.* ಇ*-16* ರಿಂದ ಇ*-18* ಹಾಗೂ ಆರ್*-31* ರಿಂದ ಆರ್*-36* ಸಹಿಗಳನ್ನು ಬರೆದಿರುವ ವ್ಯಕ್ತಿಯೇ ಪ್ರಶ್ನಿತ ಸಹಿಗಳಾದ ಕ್ಯೂ*-25* ಮತ್ತು ಕ್ಯೂ*-26* ನ್ನು ಬರೆದಿರುತ್ತಾರೆ.

*7.* ಇ*-19* ರಿಂದ ಇ*-21* ಹಾಗೂ ಆರ್*-37* ರಿಂದ ಆರ್*-42* ಸಹಿಗಳನ್ನು ಬರೆದಿರುವ ವ್ಯಕ್ತಿಯೇ ಪ್ರಶ್ನಿತ ಸಹಿಗಳಾದ ಕ್ಯೂ*-27* ಮತ್ತು ಕ್ಯೂ*-28* ನ್ನು ಬರೆದಿರುತ್ತಾರೆ.

*8.* ಇ*-22* ರಿಂದ ಇ*-24* ಹಾಗೂ ಆರ್*-43* ರಿಂದ ಆರ್*-48* ಸಹಿಗಳನ್ನು ಬರೆದಿರುವ ವ್ಯಕ್ತಿಯೇ ಪ್ರಶ್ನಿತ ಸಹಿಗಳಾದ ಕ್ಯೂ*-29* ಮತ್ತು ಕ್ಯೂ*-30* ನ್ನು ಬರೆದಿರುತ್ತಾರೆ.

*9.* ಇ*-25* ರಿಂದ ಇ*-27,* ಆರ್*-60* ರಿಂದ ಆರ್*-66* ಸಹಿಗಳನ್ನು ಬರೆದಿರುವ ವ್ಯಕ್ತಿಯು ಪ್ರಶ್ನಿತ ಸಹಿಗಳಾದ ಕ್ಯೂ*-31* ರಿಂದ ಕ್ಯೂ *39* ನ್ನು ಬರೆದಿರುವುದಿಲ್ಲ. ಪ್ರಶ್ನಿತ ಸಹಿಗಳಾದ ಕ್ಯೂ*-31* ರಿಂದ ಕ್ಯೂ*-39* ಇಮಿಟೇಷನ್ ಪೋರ್ಜರಿ ಆಗಿರುತ್ತವೆ.

*10.* ಆರ್ *49* ರಿಂದ ಆರ್*-59* ಸಹಿಗಳನ್ನು ಬರೆದಿರುವ ವ್ಯಕ್ತಿಯೇ ಪ್ರಶ್ನಿತ ಸಹಿಗಳಾದ ಕ್ಯೂ*-1* ರಿಂದ ಕ್ಯೂ*-09* ನ್ನು ಬರೆದಿರುತ್ತಾರೆ.

ನಾನು ನೀಡಿದ ಅಭಿಪ್ರಾಯಕ್ಕೆ ಕಾರಣಗಳನ್ನು ನನ್ನ ವರದಿಯಲ್ಲಿ ತಿಳಿಸಿರುತ್ತೇನೆ ಹಾಗೂ ವಿಶ್ರುತವಾಗಿ ಪಡೆದ ಮಾದರಿ ಸಹಿಗಳ ಪ್ರತಿಗಳನ್ನು ವರದಿಯೊಂದಿಗೆ ಲಗತ್ತಿಸಿರುತ್ತೇನೆ.

ಸಾಕ್ಷಿಯು ತಾವು ನೀಡಿದ ವರದಿಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ*-32* ಎಂದು, ಸಾಕ್ಷಿಯ ಸಹಿಯನ್ನು ನಿಪಿ*-32(ಎ)* ಎಂದು ಗುರುತಿಸಲಾಯಿತು. ಅಭಿಪ್ರಾಯಕ್ಕೆ ನೀಡಿದ ಕಾರಣಗಳ ಪ್ರತಿಯಲ್ಲಿನ ತಮ್ಮ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ*-33* ಎಂದು ಸಾಕ್ಷಿಯ ಸಹಿಯನ್ನು ನಿಪಿ*-33(ಎ)* ಎಂದು ಗುರುತಿಸಲಾಯಿತು. ವಿಶ್ರುತ ಪ್ರತಿಗಳಲ್ಲಿನ ಸಹಿಯನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಸದರಿ ಪ್ರತಿಗಳನ್ನು ಕ್ರಮವಾಗಿ ನಿಪಿ*-34* ರಿಂದ ನಿಪಿ*-59* ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ*-34(ಎ)* ಯಿಂದ ನಿಪಿ*-59(ಎ)* ಎಂದು ಗುರುತಿಸಲಾಯಿತು.

***ಪಾಟೀ ಸವಾಲುಃ ಆರೋಪಿ ಪರ* ಶ್ರೀ ಎಂ ಕೆ ಟಿ *ವಕೀಲರವರಿಂದಃ-***

ಒಪ್ಪಿತ ಸಹಿಗಳು ಹಾಗೂ ಮಾದರಿ ಸಹಿಗಳನ್ನು ಪೊಲೀಸರೆ ನಮಗೆ ಕಳುಹಿಸಿಕೊಟ್ಟಿದ್ದು ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಸಹಿಯು *2-3* ವರ್ಷಕ್ಕೆ ಒಮ್ಮೆ ಬದಲಾಣೆಯಾಗುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ರೈತರು ಸಹಿ ಮಾಡುವಾಗ ಕಾಲಕಾಲಕ್ಕೆ ಬದಲಾವಣೆಯಾಗುತ್ತದೆ

ಎಂದರೆ ಸರಿಯಲ್ಲ. ನಾನು ಪೊಲೀಸರ ಕೋರಿಕೆಯ ಮೇಲೆ ನೀಡಿರುವ ವರದಿಯು ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಒಪ್ಪಿತ ಹಾಗೂ ಮಾದರಿ ಸಹಿಗಳು ಯಾವ ಸಮಯದಲ್ಲಿ ಮಾಡಲಾಗಿದೆ ಎಂದು ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರಿದು ದಾಖಲೆಗಳಲ್ಲಿ ನಮೂದಾದ ದಿನಾಂಕದ ಆಧಾರದ ಮೇಲೆ ಅವುಗಳನ್ನು ಯಾವಾಗ ಮಾಡಲಾಗಿದೆ ಎಂದು ಹೇಳಬಹುದು ಎಂದು ನುಡಿಯುತ್ತಾರೆ. ಒಪ್ಪಿತ ಮತ್ತು ಮಾದರಿ ಸಹಿಗಳುಳ್ಳ ದಾಖಲೆಯ ಮೇಲೆ ದಿನಾಂಕ ನಮೂದಾಗದೇ ಇದ್ದರೆ ಅದನ್ನು ಮಾಡಿದ ಸಮಯ ಹೇಳಲಾಗುವುದಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**